**<u>ಸಾಕ್ಷಿಯನ್ನು ದಿನಾಂಕಃ 24-03-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಮುಖ್ಯ ವಿಚಾರಣೆಃ ವಾದಿ ಪರ ವಕೀಲರವರಿಂದಃ</u>**

ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ವಿಷಯಗಳೆಲ್ಲವು ಸತ್ಯವಾಗಿರುತ್ತದೆ. ಅದರಲ್ಲಿ ಇರುವ ಸಹಿ ನನ್ನದೇ ಇರುತ್ತದೆ.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**<u>ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದಃ</u>**

1. ನನಗೆ ಸಾಕ್ಷಿ ನುಡಿಯಲು ಬರುವಂತೆ ನ್ಯಾಯಾಲಯದಿಂದ ಸಮನ್ಸ ಬಂದಿರುವುದಿಲ್ಲ ನಾನು ಯಾವುದೇ ವಿದ್ಯಾಬ್ಯಾಸ ಮಾಡಿರುವುದಿಲ್ಲ ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನಗೆ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿರುವುದಿಲ್ಲ ಅಂದರೆ ಸರಿ. ನನಗೆ ಈ ಕೇಸಿನ ಕುರಿತು ವೈಯಕ್ತಿಕ ಮಾಹಿತಿ ಇರುವುದಿಲ್ಲ ಅಂದರೆ ಸರಿಯಲ್ಲ. ಈ ಕೇಸನ್ನು ಬುಳ್ಳಮ್ಮಳು ಹಂಪಮ್ಮನ ವಿರುದ್ದ ಹೊಲ ಬೇಕು ಎಂದು ದಾಖಲೆ ಮಾಡಿರುವರು. ಹೊಲದ ಸರ್ವೆ ನಂಬರನ್ನು ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನೇ ಹೇಳಿ ಬರೆಸಿದ್ದೇನೆ. ಸರ್ವೆ ನಂಬರು ಮತ್ತು ವಿಸ್ತಿರ್ಣವನ್ನು ಪಹಣಿಯನ್ನು ನೋಡಿ ಬರೆಸಬೇಕಾಗುತ್ತದೆ ಅಂದರೆ ಸರಿ.

2. ನಾನು ದಾವಾ ಅಸ್ತಿಯ ಪಹಣಿಯನ್ನು ನೋಡಿದ್ದೇನೆ, ಯಾವ ವರ್ಷದ ಪಹಣಿ ಎಂದು ನೆನಪಿರುವುದಿಲ್ಲ. ನಾನು ನೋಡಿದಾಗ ಪಹಣಿ ಬುಳ್ಳಮ್ಮನ ಹೆಸರಿನಲ್ಲಿತ್ತು. ವಾದಿಯರು ದಾವಾ ಸ್ವತ್ತನ್ನು ಪ್ರತಿವಾದಿಯಾದ ಹಂಪಮ್ಮನ ಗಂಡನಿಗೆ ಮಾರಾಟ ಮಾಡಿರುವರು ಅಂದರೆ ನನಗೆ ಗೊತ್ತಿಲ್ಲ. ಖರೀದಿ ಮಾಡಿದಾಗಿನಿಂದ

ದಾವಾ ಸ್ವತ್ತು ಪ್ರತಿವಾದಿಗಳ ಸ್ವಾಧೀನ ಅನುಭವದಲ್ಲಿರುತ್ತದೆ ಅಂದರೆ ಸರಿಯಲ್ಲ. ನನ್ನ ಹೊಲದ ಸರ್ವೆ ನಂ 68/3 ಇದ್ದು ಅದರ ವಿಸ್ತೀರ್ಣ 2 ಎಕರ 78 ಸೆನ್ಸ ಇರುವುದು. ದಾವಾ ಅಸ್ತಿಯು ವಾದಿಗಳ ಸ್ವಾಧೀನದಲ್ಲಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

3. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಇವೆ ಅಂದರೆ ಸರಿಯಲ್ಲ. ಸಿದ್ದಮ್ಮನ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

24.03.2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

ಸಾಕ್ಷಿಯ ಸಹಿ